ಕರ್ನಾಟಕ ವಿಧಾನ ಸಭೆ

ಗುರುವಾರ 18ನೇ ಜುಲೈ 1996ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11.10 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

(ಪ್ರಶ್ನೋತ್ತರಗಳು)

1. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ವಿಷಯ:- ಸೂರತ್ಕಲ್ ಪ್ರದೇಶಕ್ಕೆ ಒಳಚರಂಡಿ ವ್ಯವಸ್ಥೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 136 (944)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರಸಭೆ ವ್ಯಾಪ್ತಿಯಲ್ಲಿ ಬರುವ ಸುರತ್ಕಲ್ ಪ್ರದೇಶಕ್ಕೆ ಒಳಚರಂಡಿ ವ್ಯವಸ್ಥೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು?

ಆ) ಅಧಿಕ ಜನಸಂಖ್ಯೆ ಹೊಂದಿರುವ ಈ ನಗರಕ್ಕೆ ಜನಾರೋಗ್ಯಕ್ಕೆ ತೊಂದರೆ ಉಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಹೌದು. ಸೂರತ್ಕಲ್ ಪ್ರದೇಶವನ್ನು ಇತ್ತೀಚೆಗೆ ಮಂಗಳೂರು ಮಹಾನಗರಸಭೆಗೆ ಸರ್ಕಾರ ಆದೇಶ ಸಂ:ವನಇ 260 ಎಂಎಲ್‌ಆರ್:ದಿ: 16.10.95ರಲ್ಲಿ ಸೇರಿಸಲಾಗಿದೆ. ಸರ್ಕಾರದ ಆದೇಶದ ಪ್ರಕಾರ ಮಹಾನಗರಸಭೆಗೆ ಸೇರಿಸಿರುವ ಎಲ್ಲಾ ಪ್ರದೇಶಗಳಿಗೆ ಸಮಗ್ರ ಒಳಚರಂಡಿ ಯೋಜನೆಯನ್ನು ತಯಾರಿಸಲು ಮಂಗಳೂರು ಮಹಾನಗರಪಾಲಿಕೆಯು ಈ ಕೆಲಸವನ್ನು ಟಾಟಾ ಕನ್‌ಸರ್ವೆನ್ಸಿಯವರಿಗೆ ವಹಿಸಲು ಕ್ರಮ ಜರುಗಿಸಿದೆ.

ಆ) ಹೌದು.

ಇ) ಸರ್ಕಾರದ ಆದೇಶ ಪ್ರಕಾರ ಮಂಗಳೂರು ಮಹಾನಗರಸಭೆಗೆ ಸುರತ್ಕಲ್,

ಮೂಲ್ಕಿ ಮತ್ತು ಇತರ ಪ್ರದೇಶಗಳನ್ನು ಸೇರಿಸಿಕೊಂಡು ಬೃಹತ್ ಮಂಗಳೂರು ಆಗಿ ಪರಿವರ್ತನಗೊಂಡಿರುವುದರಿಂದ ಒಳಚಂಡಿ ಯೋಜನೆಯು ಮಂಗಳೂರು ವ್ಯಾಪ್ತಿಗೆ ಬರುತ್ತದೆ. ಈ ಸಮಗ್ರ ಒಳಚರಂಡಿ ಯೋಜನೆಯು ಅನುಷ್ಠಾನಕ್ಕಾಗಿ ಸರ್ವೆ ಮತ್ತು ನಕ್ಷೆಯನ್ನು ತಯಾರಿಸಲು ಮಹಾನಗರ ಪಾಲಿಕೆಯು ಮೆ:ಟಾಟಾ ಕನ್ಸಲ್‌ಟೆಂಟ್ಸ್‌ರವರ ಜೊತೆ ಒಪ್ಪಂದ ಮಾಡುವ ಹಂತದಲ್ಲಿದೆ.

ಶ್ರೀ ಕುಂಬ್ಳೆ ಸುಂದರರಾವ್:- ಅಧ್ಯಕ್ಷರೇ, ಮಂಗಳೂರು ಮಹಾನಗರ ಸಭೆ ವ್ಯಾಪ್ತಿಯೊಳಗೆ, ಈಗಾಗಲೇ ಸುರತ್ಕಲ್ ಪುರಸಭಾ ವ್ಯಾಪ್ತಿ ಸೇರಿಬಿಟ್ಟಿದೆ. ಮಹಾನಗರ ಮಹಾಗರ್ಭಕ್ಕೆ ಸೇರಿದೆ. ಅಲ್ಲಿನ ಸಂಕಷ್ಟ, ಸರ್ಕಾರದ ಗಮನಕ್ಕೆ ಯಾವಾಗ ಬಂತು? ಒಳಚರಂಡಿ ಯೋಜನೆಯಿಂದ ಆಗುವಂಥ ಅನಾಹುತ, ಅನಾರೋಗ್ಯಕರ ವಾತಾವರಣ ಇದು ಸರ್ಕಾರದ ಗಮನಕ್ಕೆ ಯಾವತ್ತು ಬಂತು? ಅದರ ಪರಿಹಾರಕ್ಕೆ ಸದ್ಯ ಏನು ಕ್ರಮ ಕೈಗೊಂಡಿದೆ, ಎಂದು ಮೊದಲನೆಯ ಪ್ರಶ್ನೆಯನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಸುರತ್ಕಲ್ ಪಟ್ಟಣ ಮಂಗಳೂರಿಗೆ 25 ಕಿಲೋಮೀಟರಿನಲ್ಲಿದೆ. ಈಗ ಗ್ರೇಟರ್ ಮಂಗಳೂರು, ಮಂಗಳೂರಿನ ವಿಸ್ತರಣೆಯಾಗಿ, ಸುಮಾರು ಹತ್ತಾರು ಹಳ್ಳಿಗಳು ಮಂಗಳೂರಿನ ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬರುತ್ತವೆ. ಅದರಲ್ಲಿ, ಮುಲ್ಕಿ, ಕಾಟಿಪಾಳ, ಕುಳಾಯಿ, ಹೊಸಬೆಟ್ಟು, ಬೈಕಂಪಾಡಿ, ಬೆಂಗ್ರೆ, ತಣ್ಣೀರುಬಾವಿ, ಪಣಂಬೂರು, ಕಲ್ಮಾಡಿ, ಬೆಳ್ಳಯಾರು, ಪಡುಪಣಂಬೂರು ಮತ್ತು ಇನ್ನಿತರ ಪ್ರದೇಶಗಳನ್ನು ಸೇರಿಸಲಾಗಿದೆ. ಮತ್ತು ಈಗ ಗ್ರೇಟರ್ ಮಂಗಳೂರಾಗಿದೆ. ಹಿಂದೆ 1993-94ರಲ್ಲಿ 385 ಲಕ್ಷ ರೂಪಾಯಿಗಳ ಒಂದು ಯೋಜನೆ ಮಾಡಲಾಗಿತ್ತು. ಸುರತ್ಕಲ್‌ನಲ್ಲಿ ಈಗಾಗಲೇ ಬಹಳಷ್ಟು ಆಸ್ಪತ್ರೆ ಮತ್ತು ವಾಣಿಜ್ಯ ಸಂಕೀರ್ಣಗಳು ಬರುತ್ತಾ ಇವೆ. ಜೊತೆಗೆ ವಿದ್ಯಾಸಂಸ್ಥೆಗಳು ಇವೆ. ಇದೆಲ್ಲದರ ದೃಷ್ಟಿಯಿಂದ 2021ರ ಯೋಜನೆಗೆ, ಒಂದು ಲಕ್ಷ ಜನಸಂಖ್ಯೆ ಆಧಾರಿತವಾಗಿ ಒಂದು ಯೋಜನೆಯನ್ನು ರೂಪಿಸಿಕೊಳ್ಳಲಾಗಿದೆ. ಈಗ ಅದು ಗ್ರೇಟರ್ ಮಂಗಳೂರು ಕಾನ್ಸೆಪ್ಟ್‌ನಲ್ಲಿ ಬಂದಿರುವುದರಿಂದ, ಈ ಹಳ್ಳಿಗಳು ಎಲ್ಲಾ ಸೇರಿ, ಹೊಸದಾಗಿ ಒಂದು ಪರಿಷ್ಕೃತ ಅಂದಾಜು ಮಾಡಿ, ಇದನ್ನೂ ಮಂಗಳೂರು ಮಹಾನಗರ ಪಾಲಿಕೆಯವರೇ ಮೆ:ಟಾಟಾ ಕನ್ಸಲ್‌ಟೆಂಟ್ಸ್‌ನವರಿಗೆ ಒಪ್ಪಿಸಿದ್ದಾರೆ. ಅವರು ಒಂದು ಬೃಹತ್ ಯೋಜನೆಯನ್ನು ರೂಪಿಸಿಕೊಡುವುದರಲ್ಲಿ, ಆ ಯೋಜನೆಯ ಮೂಲಕ, ಅದನ್ನು ತೆಗೆದುಕೊಳ್ಳುತ್ತೇವೆ. ಆ ಅಂಡರ್‌ಗ್ರೌಂಡ್ ಡ್ರೈನೇಜ್ ಸ್ಕೀಮನ್ನು ಮಹಾನಗರ ವ್ಯಾಪ್ತಿಯಲ್ಲಿ ಬರತಕ್ಕಂಥ ಎಲ್ಲಾ, ವಿಸ್ತೃತ ಪ್ರದೇಶಗಳಲ್ಲೆಲ್ಲಾ ಅಭಿವೃದ್ಧಿಯಾಗುವ ದೃಷ್ಟಿಯಲ್ಲಿ ನೀರು ಮತ್ತು ಒಳಚರಂಡಿ ವ್ಯವಸ್ಥೆ ಎರಡನ್ನೂ ತೆಗೆದುಕೊಳ್ಳುವಂಥಾದ್ದು, ಈಗ ಟಾಟಾ ಕನ್ಸಲ್‌ಟೆಂಟ್ಸ್‌ನಿಂದ ಬಂದಂಥ ಯೋಜನೆ, ಒಂದು ನಕ್ಷೆ, ಬ್ಲೂಪ್ರಿಂಟ್ ಬಂದಾದ ನಂತರ ಆ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್:- ಮಾನ್ಯ ಅಧ್ಯಕ್ಷರೇ, ನನ್ನ ಮುಖ್ಯ ಪ್ರಶ್ನೆಗೆ ಉತ್ತರ

ಕೊಡಲಿಲ್ಲ. ಆರೋಗ್ಯಕ್ಕೆ ಹಾನಿಯುಂಟಾಗತಕ್ಕ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಹೌದು ಎಂದು ಹೇಳಿದ್ದಾರೆ. ಸರ್ಕಾರದ ಗಮನಕ್ಕೆ ಬಂದಿದ್ದರೆ ತಾತ್ಕಾಲಿಕವಾಗಿ ಅದಕ್ಕೆ ತಡೆಯೊಡ್ಡುವ ವ್ಯವಸ್ಥೆ ಬೇಕೋ ಅಥವಾ ಬೇಡವೋ. ಜನರ ಆರೋಗ್ಯ ಕೆಟ್ಟುಹೋಗಲಿ ಎಂದು ಸರ್ಕಾರ ಬಿಡುವುದಿಲ್ಲ ತಾನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಈಗ ಅಲ್ಲಿ ಕೈಗಾರಿಕಾ ಪ್ರದೇಶಗಳಾಗಿ, ಹೆಚ್ಚು ಒತ್ತಡ ಆಗಿದೆ. ಹಿಂದೆ ಅಲ್ಲಿ ಶೌಚಾಲಯ ವ್ಯವಸ್ಥೆ ಸೆಪ್ಟಿಕ್ ಟ್ಯಾಂಕ್ ಇಂಥಾದ್ದು ಕಟ್ಟಿಕೊಂಡು ಮಾಡುತ್ತಾ ಇದ್ದರು. ಇದಕ್ಕೆ ಯಾವಾಗಲೂ ಒಂದು ಫ್ಯುಯಲ್ ಸಿಸ್ಟಂ ಬೇಕಾದರೆ ಒಳಚರಂಡಿ ವ್ಯವಸ್ಥೆ ಹೆಚ್ಚು ನೀರಿನ ಅವ್ಯಶಕತೆ ಇದೆ. ಆ ನೀರಿನ ಮೂಲಕ ಸೀಯಜ್ ಆಕಡೆ ಹೋಗುವಂತಾದ್ದು. ಗ್ರಾಮಸಾರ್ಥ ಆಚೆ ಹೋಗಬೇಕು. ಅದು ಒಂದು ಕಡೆ ಸಾಲಿಡ್ಸ್ ಸೇರುತ್ತದೆ. ಆಮೇಲೆ ಫಿಟಮೆಂಟ್ ಆಗಬೇಕು. ರೀ ಸೈಕ್ಲಿಂಗ್ ಆಗಬೇಕು, ಇದೆಲ್ಲ ವ್ಯವಸ್ಥೆ ಯೋಜನೆಯಲ್ಲಿದೆ. ಆ ದೃಷ್ಟಿಯಲ್ಲಿ ಇದು ತಡವಾಗಿರತಕ್ಕಂಥಾದ್ದು, ಆದ್ದರಿಂದ, ಇದು ಹೇಗೂ ಮಂಗಳೂರು ಮಹಾನಗರ ಪಾಲಿಕೆಗೆ ಸೇರಿರುವುದರಿಂದ, ಆದಷ್ಟು ಬೇಗ ತಮ್ಮ ಆಸೆ ಏನಿದೆ, ಆ ಕಾರ್ಯವನ್ನು ಮುಗಿಸಿಕೊಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್:- ನಾನು ಕೇಳಿರುವ ವಿಷಯವೇನೆಂದರೆ, ಆಲ್ಲಿ ತಾತ್ಕಾಲಿಕ ವ್ಯವಸ್ಥೆ ಏನಾಗಿದೆ?

ಶ್ರೀ ಬಿ.ಎನ್.ಬಚ್ಚೇಗೌಡ:- ವ್ಯವಸ್ಥೆ ಇದೆ. ಗ್ರಾಮ ನೈರ್ಮಲ್ಯ ಕೆಡುತ್ತದೆ, ಅದು ನಮ್ಮ ಗಮನಕ್ಕೆ ಬಂದಿದೆ. ಅದನ್ನು ಮಾಡಬೇಕು, ಮಾಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್:- ಸಚಿವರಿಗೆ ಸರಿಯಾದಂಥ ಮಾಹಿತಿ ಗೊತ್ತಿಲ್ಲವೆಂದು ಹೇಳುತ್ತೇನೆ. ಸುರತ್ಕಲ್ ಪುರಸಭೆಯೊಳಗೆ ಈಗೇನು ತಾತ್ಕಾಲಿಕ ವ್ಯವಸ್ಥೆಯಾಗಿದೆ, ಅದಕ್ಕೆ ಸಂಬಂಧಪಟ್ಟ ಹಾಗೆ ಕೇಳುತ್ತೇನೆ. ಅಲ್ಲಿ ಟ್ರಾಕ್ಟರು ಟ್ಯಾಂಕರು ತೆಗೆದುಕೊಂಡು ಹೋಟೆಲುಗಳಿಗೆ ನೀರನ್ನು ಸಾಗಿಸುತ್ತಿದ್ದಾರೆ. ಒಂದು ದಿವಸ ಟ್ರಾಕ್ಟರ್ ಬಂದ್ ಆದರೆ ಪರಿಸರ ಮಲಿನವಾಗಿ, ಕೆಟ್ಟ ವಾಸನೆ ಬರುತ್ತದೆ. ಇದು ಪರಿಸ್ಥಿತಿ. ಈ ಪರಿಸ್ಥಿತಿಯನ್ನು ಎಷ್ಟು ದಿವಸ ಮುಂದುವರಿಸುವುದಕ್ಕಾಗುತ್ತದೆ? ಆರೋಗ್ಯ ಕೆಡುತ್ತದೆ. ಟಾಟಾ ಕನ್ಸಲ್ಟೆಂಟ್ಸ್‌ನವರು ಸರ್ವೆ, ನಕ್ಷೆ, ಒಪ್ಪಂದ ಇದನ್ನೆಲ್ಲಾ ಪೂರೈಸಿ, ಇದು ಆಗುವುದು ಯಾವಾಗ? ನಮಗೆ ಒಂದು ಅವಧಿ ಬೇಕಲ್ಲ. ಯಾವಾಗ ಪೂರೈಸಿಕೊಡುತ್ತೀರಿ? ಕನ್ನಡಿಯೊಳಗೆ ಚಂದ್ರನನ್ನು ತೋರಿಸಿದ ಹಾಗೆ ಮಾಡಿದರೆ. ಚಂದ್ರ ಕಾಣುತ್ತಾನೆ, ಕೈಗೆ ಸಿಗುವುದಿಲ್ಲ ಅನುಭವಕ್ಕೆ ಬರುವುದಿಲ್ಲ. ಹಾಗಾಗಬಾರದು. ಯಾವಾಗ ಆಗುತ್ತದೆ ಇದಕ್ಕೆ ಸರಿಯಾದಂಥ, ಖಚಿತವಾದಂಥ ದಿನ ಹೇಳಿದರೆ ಸಂತೋಷವಾಗುತ್ತದೆ ಸಮಾಧಾನವಾಗುತ್ತದೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಪ್ರಿವೆಂಟ್ ಮಾಡಲಿಕ್ಕೆ ವರದಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳುತ್ತೇನೆ. ಅತಿ ಶೀಘ್ರದಲ್ಲಿಯೇ ಮಾಡೋಣ.